ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐ.ಆರ್.ಡಿ.ಪಿ. ಯೋಜನೆ

2360 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಐ.ಆರ್.ಡಿ.ಪಿ. ಯೋಜನೆಯನ್ವಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91 ನೇ ಸಾಲಿಗೆ ವಿತರಣೆ ಮಾಡಿದ ಸಾಲ ಎಷ್ಟು ಮತ್ತು ಫಲಾನುಭವಿಗಳಿಗಳ ಸಂಖ್ಯೆ ಎಷ್ಟು?

ಆ) ಈ ಯೋಜನೆಯ ಫಲಾನುಭವಿಗಳ ಆಯ್ಕೆ ಯಾವ ರೀತಿ ಮಾಡಲಾಗಿದೆ.

ಇ) ಫಲಾನುಭವಿಗಳನ್ನು ಆಗಾಗ ಬದಲಾಯಿಸುವ ಕಾರಣವೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ವಿತರಣೆ ಮಾಡಿದ ರೂ. 266.565 ಲಕ್ಷ

ಒಟ್ಟು 9,783 ಫಲಾನುಭವಿಗಳು

ಆ) ಬಡತನ ರೇಖೆ ಕೆಳಗಿರುವಂತಹ ಬಡವರ ಪಟ್ಟಿಯಿಂದ ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆರಿಸಲಾಗುವುದು ಹಾಗೂ ನಿಗದಿತ ಪ್ರಮಾಣದಲ್ಲಿ ಮೀಸಲು ಮಾಡಿದಂತೆ ಫಲಾನುಭವಿಗಳನ್ನು ಆರಿಸಲಾಗಿದೆ.

ಇ) ಫಲಾನುಭವಿಗಳ ಆಯ್ಕೆಯ ನಂತರ ಯೋಜನೆಯ ಪ್ರಯೋಜನವನ್ನು ಕಾರಣಾಂತರಗಳಿಂದ ಪಡೆಯದೇ ಹೋದಲ್ಲಿ ಅಥವಾ ನಿಗದಿತ ದಾಖಲೆಗಳನ್ನು ಹಾಜರುಪಡಿಸದಿದ್ದಲ್ಲಿ ಫಲಾನುಭವಿಗಳ ಬದಲಾವಣೆ ಅನಿವಾರ್ಯ.

ಶ್ರೀ ಜಿ.ಎಸ್. ಆಚಾರ್ : ಅಧ್ಯಕ್ಷರೆ, ಐ.ಆರ್.ಡಿ.ಪಿ. ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಲಾಗುತ್ತದೆ. ಹಾಗೂ ನಿಗದಿತ ದಾಖಲೆಗಳು ಇಲ್ಲದೇ ಇದ್ದಲ್ಲಿ ಬದಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನನಗೆ ತಿಳಿದ ಹಾಗೆ ಗ್ರಾಮ ಸಭೆಗಳು ಹರಕೆ ತೀರಿಸುವ ಸಭೆಗಳಾಗಿವೆ. ಅದರಲ್ಲಿ ಕೇವಲ ಏಳೆಂಟು ಜನರು ಇರುತ್ತಾರೆ. ನನ್ನ ಕ್ಷೇತ್ರದಲ್ಲಿಯೇ ಒಂದು ಗ್ರಾಮ ಸಭೆಯಲ್ಲಿ ಒಂದು ನಿರ್ಣಯ ಮಾಡಿ ಜಿಲ್ಲಾ ಪರಿಷತ್‌ಗೆ ಕಳುಹಿಸಿದರು - ಶಾಸಕರು ಅಟೆಂಡ್ ಆಗುವುದಿಲ್ಲವೆಂದು ನಾನೇ ಅಲ್ಲಿಗೆ ಹೋಗಿ ನೋಡಿದಾಗ ಏಳೆಂಟು ಜನರು ಇದ್ದಾರೆ, ಇಲ್ಲಿ ಫಲಾನುಭವಿಗಳ ಆಯ್ಕೆ ಹೇಗೆ ಅಂದರೆ, ಇಲ್ಲಿ ಪ್ರಚಾರ ಮಾಡಲೇ ಇಲ್ಲ, ಜನರು ಬಾರದೇ ಇದ್ದುದರಿಂದ, ಒಂದೊಂದು ಮಂಡಲ್ ಪಂಚಾಯತ್ ಸದಸ್ಯರೂ ಒಬ್ಬೊಬ್ಬನನ್ನು ಆಯ್ಕೆ ಮಾಡುವುದು ಎಂದು ಅವರೇ ಹಂಚಿಕೊಂಡುಬಿಟ್ಟರು. ಫೈನಲ್‌ನಲ್ಲಿ ಅವರ ಮನೆಯವರಿಗೆ, ಅವರ ಕೆಲಸದವರು, ತಮ್ಮಂದಿರು, ಇವರೇ ಆಯ್ಕೆಯಾಗಿರುವವರು, ಇದು ತಪ್ಪಾದ ಒಂದು ಕ್ರಮ. ಗ್ರಾಮಸಭೆಗಳನ್ನು ಸಮರ್ಪಕವಾಗಿ ಕರೆದು ಆಯ್ಕೆ ಮಾಡಬೇಕು. ಅದರಲ್ಲಿ ಎಲ್ಲಾ ಫಲಾನುಭವಿಗಳಿಗೂ ತಿಳಿಸಬೇಕು. ಕನ್ ಸರ್ನ್ಡ್ ಬ್ಯಾಂಕಿಂಗ್ ಇನ್ಸ್ಟಿಟ್ಯೂಷನ್ ನವರು ಯಾರು ಇದ್ದಾರೆ ಅವರು ಬರಬೇಕು. ಅವರು ಇದ್ದು ಆಯ್ಕೆ ಮಾಡುವಾಗ, ಅವರು ಡಿಫಾಲ್ಟರ್ ಹೌದೋ,

ಪ್ರಸಂಗ ಬರುವುದಿಲ್ಲ. ಈ ರೀತಿ ಸಮರ್ಪಕವಾಗಿ ನಡೆಯುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಕೇಳಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸದಸ್ಯರು ಪ್ರಶ್ನೆಗೆ ಉತ್ತರ ಕೇಳುವುದಕ್ಕೆ ಮೊದಲು ಅವರೇ ಉತ್ತರ ಹೇಳಿದ್ದಾರೆ. ಆದರೂ ಸಹ ಅವರ ಸಮಾಧಾನಕ್ಕೆ ಉತ್ತರ ಹೇಳುತ್ತೇನೆ. ಇದು ಸಮಗ್ರ ಗ್ರಾಮೀಣ ಯೋಜನೆ. ಈ ಯೋಜನೆಯನ್ವಯ ಸಣ್ಣ ರೈತರಿಗೆ ಶೇಕಡಾ 25ರಷ್ಟು ಸಹಾಯಧನ, ಅತೀ ಸಣ್ಣ ರೈತರಿಗೆ ಶೇಕಡ 33ರಷ್ಟು ಸಹಾಯಧನ ಮತ್ತು ಪರಿಶಿಷ್ಟ ಜನಾಂಗ ಮತ್ತು ಪಂಗಡದವರಿಗೆ ಶೇಕಡ 50ರಷ್ಟು ಸಹಾಯಧನ ಕೊಡುತ್ತಾರೆ. ಉಳಿದ ಹಣವನ್ನು ಬ್ಯಾಂಕ್‌ನಿಂದ ಕೊಡಿಸಬೇಕಾಗುತ್ತದೆ. ಇವೆರಡೂ ಕೂಡಿದಾಗ ಮಾತ್ರ ಗ್ರಾಮೀಣ ಯೋಜನೆ ಕೆಲಸ ಆಗತ್ತದೆ. ಈಗಾಗಲೇ ಸೌತ್ ಕೆನರಾದಲ್ಲಿ ನಾವು ಒಟ್ಟು 24,115 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. 1990-91ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 9,783 ಫಲಾನುಭವಿಗಳಿಗೆ 2 ಲಕ್ಷದ 66 ಸಾವಿರ ರೂಪಾಯಿ ಸಹಾಯಧನವನ್ನು ಒದಗಿಸಲಾಗಿದೆ. ಈ ರೀತಿ ಸಹಾಯ ಮಾಡಿದ ಒಟ್ಟು ಜನರ ಪೈಕಿ 3,767 ಜನ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸೇರಿದ್ದಾರೆ. ಅವರುಗಳಿಗೆ 72 ಲಕ್ಷ ರೂಪಾಯಿ ಸಹಾಯ ಧನ ಒದಗಿಸಲಾಗಿದೆ. ಈಗ ತಾವು ಹೇಳಿದಂತೆ ಪ್ರಚಾರದ ಬಗ್ಗೆ ಎಷ್ಟೇ ಪತ್ರಿಕೆಗಳನ್ನು ಪ್ರಕಟಣೆ ಮಾಡಿದರೂ ಸಹ ಇನ್ನೂ ಆಗಿಲ್ಲ. ಮಾನ್ಯ ಸದಸ್ಯರಿಗೆ ಪುಸ್ತಕಗಳನ್ನು ಕಳುಹಿಸಲಿಕ್ಕೆ ಹೇಳುತ್ತೇನೆ ತಮ್ಮ ತಮ್ಮ ಕಾನ್‌ಸ್ಟ್ಯೂಯೆನ್ಸಿಯಲ್ಲಿ ಅದರ ಪ್ರಚಾರವನ್ನು ಹೆಚ್ಚು ಮಾಡಬೇಕು.

ಶ್ರೀ ಜಿ.ಎಸ್. ಆಚಾರ್ : ಅಧ್ಯಕ್ಷರೇ, ಈ ಆಯ್ಕೆಯ ಒಂದು ವಿಪರ್ಯಾಸದ ಜೊತೆಗೆ ವಿತರಣೆಯಲ್ಲೂ ತೊಂದರೆ ಇದೆ. ಪ್ರತಿ ತಿಂಗಳಿನಲ್ಲಿಯೂ ತಾಲ್ಲೂಕು ಮಟ್ಟದಲ್ಲಿ, ಅಸಿಸ್ಟೆಂಟ್ ಕಮೀಷನರ್ ಅಧ್ಯಕ್ಷತೆಯಲ್ಲಿ ಈ ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್ ಸಭೆ ನಡೆಯುತ್ತದೆ, ರೆವ್ಯೂ ಮಾಡುತ್ತಾರೆ. ಆದರೂ ಸಹ ತಿಂಗಳು, ತಿಂಗಳಲ್ಲಿ ಕೊಡಬೇಕಾದ ಸಾಲವನ್ನು ಕೊಡದೇ, ವರ್ಷಾಂತ್ಯದವರೆಗೆ ಕಾಯ್ದಿಟ್ಟುಕೊಂಡು ಅನೇಕ ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್‌ಗಳು ಇದ್ದವರಿಗೆ ಕೊಡಲಿಕ್ಕೆ ಬರುವುದಿಲ್ಲವೆಂದು ತೀರ್ಮಾನ ಮಾಡಿರುತ್ತಾರೆ. ಆ ರೀತಿಯಾಗಿ ನಿಗದಿತ ಗುರಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ, ವರ್ಷಾಂತ್ಯದಲ್ಲಿ ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್‌ನವರು ಮತ್ತು ಮಂಡಲ್ ಪಂಚಾಯತ್‌ರವರು ಯಾರೋ ಸೇರಿಕೊಂಡು, ಯಾರಿಗೋ ಕೊಟ್ಟು ಇದನ್ನು ಮುಗಿಸಿಬಿಡುತ್ತಾರೆ. ಈ ರೀತಿಯ ಕಾರ್ಯಕ್ರಮ ಆಗಬಾರದು. ಬಡವರಿಗೆ ಇರತಕ್ಕಂಥ ಕಾರ್ಯಕ್ರಮವನ್ನು ಯಾರೋ ತಿಂದು ಯಾರೋ ಹೊಟ್ಟೆಯನ್ನೊರೆಯುವ ಕಾರ್ಯಕ್ರಮವಾಗುತ್ತದೆ. ಈ ರೀತಿ ಆದರೆ, ಯಾವ ಸರ್ಕಾರ ಇದ್ದರೂ ಅದಕ್ಕೆ ಕೆಟ್ಟ ಹೆಸರು ಬರುತ್ತದೆ. ಆದ್ದರಿಂದ, ಇದರ ಅನುಷ್ಠಾನದಲ್ಲಿ ಸಮರ್ಪಕವಾದ ವ್ಯವಸ್ಥೆಯಾಗುವಂತೆ ನೋಡಿಕೊಳ್ಳಬೇಕೆಂದು ನನ್ನ ಪ್ರಶ್ನೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಾಗಿದೆ. ಬ್ಯಾಂಕಿನವರು ಹಣ ಕೊಡುವುದರಲ್ಲಿ ತಡ ಮಾಡುತ್ತಿದ್ದಾರೆ. ಕಾರಣವೇನೆಂದರೆ, ಹಿಂದೆ ಕೊಟ್ಟಿರತಕ್ಕ ಹಣವೇ ಇನ್ನೂ ವಸೂಲಾಗಿಲ್ಲ. ಸಮಯಕ್ಕೆ ಸರಿಯಾಗಿ ಹಣವನ್ನು ಕಟ್ಟತಕ್ಕ ಪದ್ಧತಿ ನಮ್ಮಲ್ಲಿಲ್ಲ. ಆದುದರಿಂದ ಅವರು ಮುಂದೆ ಹಣವನ್ನು ಕೊಡುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ. ಆದರೂ ನಾವು ಪ್ರಯತ್ನ ನಡೆಸಿದ್ದೇವೆ. ಆರ್ಥಿಕ ಇಲಾಖೆಯವರಿಗೆ ಬರೆದು ಪ್ರಯತ್ನ ಮಾಡುತ್ತಿದ್ದೇವೆ. ಪ್ಲಾನಿಂಗ್